2017 ಕ.ತೀ.ವ. 1271

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

ಶ್ರೀ ಹುಸೇನ್ -ವಿರುದ್ಧ- ಶ್ರೀ ಇಮ್ತಿಯಾನ್ ಖಾನ್ ಮತ್ತು ಇನ್ನೊಬ್ಬರು*

ಮೋಟಾರು ವಾಹನಗಳ ಅಧಿನಿಯಮ, 1988 – 173(1)ನೇ ಪ್ರಕರಣ

ಪ್ರಸ್ತುತ ಪ್ರಕರಣದಲ್ಲಿ ಮೃತ ಕ್ಲೇಮುದಾರನ ಕಾನೂನುಬದ್ಧ ಪ್ರತಿನಿಧಿಯು ಆತನ ಮರಣಾನಂತರ ಮೇಲ್ಮನವಿಯನ್ನು ಮುಂದುವರೆಸುವ ಹಕ್ಕನ್ನು ಹೊಂದಿದ್ದಾನೋ ಇಲ್ಲವೋ ಎಂಬ ಕಾನೂನು ಪ್ರಶ್ನೆ ಉದ್ಭವವಾಗಿದೆ.

ಕರ್ನಾಟಕ ಉಚ್ಚ ನ್ಯಾಯಾಲಯದ ಪೂರ್ಣ ಪೀಠವು *ಕನ್ನಮ್ಮ -ವಿರುದ್ಧ- ಡೆಪ್ಯೂಟಿ ಜನರಲ್ ಮ್ಯಾನೇಜರ್ (ಐಎಲ್‌ಆರ್ 1990 ಕರ್ನಾಟಕ 4300)* ಮತ್ತು ಮಧ್ಯಪ್ರದೇಶ ಉಚ್ಚ ನ್ಯಾಯಾಲಯದ *ಶಾಂತಾಬಾಯಿ ದುಬೆ -ವಿರುದ್ಧ- ಕನ್ನಯ್ಯಲಾಲ್ (1995 ಎಸಿಜೆ, 706)* ಪ್ರಕರಣಗಳಲ್ಲಿ ಎತ್ತಿ ಹಿಡಿದ ಕಾನೂನಿನ ಅಂಶದ ಅಡಿ ಉತ್ತರಾಧಿಕಾರಿ ಅಧಿನಿಯಮದ 306ನೇ ಪ್ರಕರಣದಲ್ಲಿ ಒಳಗೊಂಡ 'ವ್ಯಕ್ತಿಗಳ ಹಕ್ಕಿನ ವ್ಯವಹರಣೆಯು ವ್ಯಕ್ತಿಯ ಮರಣದೊಂದಿಗೆ ಅಂತ್ಯವಾಗುತ್ತದೆ. ***'Actio personalis monitur cum persona'*** ಎಂಬ ಸಾಮಾನ್ಯ ಕಾನೂನು ನಿಯಮವು ಭಾರತಕ್ಕೆ ಅನ್ವಯವಾಗುವುದರಿಂದ, ವ್ಯಕ್ತಿಗಳ ಮರಣವು ಅಂಥ ಗಾಯಗಳ ಪರಿಣಾಮದಿಂದ ಉಂಟಾಗದಿರುವುದರಿಂದ ಮೋಟಾರು ಅಪಘಾತದಲ್ಲಿ ಉಂಟಾದ ದೈಹಿಕ ಗಾಯಗಳಿಗೆ ಸಂಬಂಧಿಸಿದಂತೆ ಪರಿಹಾರಕ್ಕಾಗಿ ವ್ಯಕ್ತಿಯು ಮಾಡಿದ ಕ್ಲೇಮು ಆತ/ಆಕೆಯ ಕಾನೂನು ಪ್ರತಿನಿಧಿಗಳಿಗೆ ಉಳಿಯುವುದಿಲ್ಲ. ಆದ್ದರಿಂದ ಅಪೀಲನ್ನು ತಿರಸ್ಕರಿಸಲಾಗಿದೆ.

* ಸಂಕೀರ್ಣ ಮೊದಲ ಮೇಲ್ಮನವಿ ಸಂಖ್ಯೆ.: 20130/2009 (ಎಂವಿ), ದಿನಾಂಕ: 10ನೇ, ಫೆಬ್ರವರಿ 2017.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *ಐಎಲ್‌ಆರ್ 1990 ಕರ್ನಾಟಕ 4300*
*ಕನ್ನಮ್ಮ –ವಿರುದ್ಧ–*
*ಡೆಪ್ಯೂಟಿ ಜನರಲ್ ಮ್ಯಾನೇಜರ್* *(ಉಲ್ಲೇ) 5*
2. *1995 ಎಸಿಜೆ 706*
*ಶಾಂತಬಾಯಿ ದುಬೆ ಮತ್ತು ಇನ್ನೊಬ್ಬರು –ವಿರುದ್ಧ–*
*ಕನ್ನಯ್ಯಲಾಲ್ ಮತ್ತು ಇನ್ನೊಬ್ಬರು* *(ಉಲ್ಲೇ) 5*
3. *1996 ಎಸ್‌ಸಿಸಿ 118*
*ಮಿಲಿ ಪುರತ್ ಸಂಕುನ್ನಿ ಎಜ್‌ಹುಥಾಸನ್ –ವಿರುದ್ಧ–*
*ಥೆಕಿಟಿಲ್ ಜಿಯೋಪಾಲಂಕುಟ್ಟಿ ನಾಯರ್* *(ಉಲ್ಲೇ) 11*

ಅರ್ಜಿದಾರರ ಪರ : ಶ್ರೀಎನ್.ಪಿ, ವಿವೇಕ್‌ಮೆಹ್ತಾ, ವಕೀಲರು;
ಪ್ರತ್ಯರ್ಜಿದಾರರ ಪರ : ಶ್ರೀ ರವಿ ಜಿ. ಸಭಾಹಿತ್, ವಕೀಲರು.
1ನೇ ಪ್ರತ್ಯರ್ಜಿದಾರರಿಗೆ ನೋಟೀಸ್ ಜಾರಿ ಮಾಡಿದೆ.

## ತೀರ್ಪು

**ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್:**

ಗಾಯಗೊಂಡ ಕ್ಲೇಮುದಾರನ ಕಾನೂನುಬದ್ಧ ಪ್ರತಿನಿಧಿ ಹುಸೇನ್ ಸಾಬ್, ಆತನ ಮರಣಾ ನಂತರ ಅಪೀಲನ್ನು ಮುಂದುವರೆಸುವ ಹಕ್ಕನ್ನು ಹೊಂದಿರುತ್ತಾನೆಯೇ? ಎಂಬ ಪ್ರಶ್ನೆಗೆ ಉತ್ತರಿಸಬೇಕಾದ ಅವಶ್ಯಕತೆಯಿರುತ್ತದೆ. ಸಲ್ಲಿಸಲಾಗಿರುವ ಕ್ಲೇಮು ಅರ್ಜಿಯನ್ನು ಬೆಂಬಲಿಸಲು ಕೆಲವು ವಾಸ್ತವಾಂಶಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿರುತ್ತದೆ. ಸಂಜೆ ಸುಮಾರು 4.30ರ ವೇಳೆಗೆ ಕೆ.ಎ.25/7476 ಸಂಖ್ಯೆಯನ್ನು ಹೊಂದಿದ್ದ ಲಾರಿಯನ್ನು ಅದರ ಹೆಚ್ಚುವರಿ ಚಾಲಕ ಚಾಲನೆ ಮಾಡುತ್ತಿರುವಾಗ ಲಾರಿಯ ಕ್ಯಾಬಿನ್‌ನಲ್ಲಿ ಲಾರಿ ಚಾಲಕ ಹುಸೇನ್ ಸಾಬ್

ಕುಳಿತುಕೊಂಡಿರುತ್ತಾನೆ. ಹೆಚ್ಚುವರಿ ಚಾಲಕನ ಅತಿವೇಗ, ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿ ಚಾಲನೆಯಿಂದಾಗಿ, ಲಾರಿಯ ಚಲನೆಯಲ್ಲಿ ನಿಯಂತ್ರಣ ಕಳೆದುಕೊಂಡು ಲಾರಿ ತಲೆಕೆಳಗಾಗಿ ಬೀಳುತ್ತದೆ. ಇದರ ಪರಿಣಾಮವಾಗಿ ಹುಸೇನ್ ಸಾಬ್‌ನಿಗೆ ಕಿಬೊಟ್ಟೆಯ ಕೆಳಗಿನ ವಸ್ತಿ ಕುಹರ ಹಾಗೂ ರೊಂಡಿಮೂಳೆಗಳೆರಡೂ ಮುರಿದು ಹೋಗಿರುತ್ತವೆ. ಸದರಿ ಅಪಘಾತದ ಸಂಬಂಧದಲ್ಲಿ ಈತ ಪರಿಹಾರವನ್ನು ಕೋರಿದ್ದು, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಸಿರಸಿ ಇಲ್ಲಿ ಅರ್ಜಿ ಸಲ್ಲಿಸಿದ ದಿನದಿಂದ ವಾರ್ಷಿಕ ಶೇ.6ರ ಬಡ್ಡಿಯೊಂದಿಗೆ 91,000/- ಸಾವಿರ ರೂ.ಗಳ ಪರಿಹಾರವನ್ನು ನೀಡಿ ದಿನಾಂಕ 23.9.2008ರಂದು ಎಂವಿಸಿ 92/2005ರ ಕಡತದ ಮೇಲೆ ಐತೀರ್ಪನ್ನು ಹೊರಡಿಸಿರುತ್ತದೆ.

2. ಈ ಐತೀರ್ಪಿಗೆ ತನ್ನ ಅಸಮ್ಮತಿಯನ್ನು ತೋರಿ, ಹುಸೇನ್ ಸಾಬ್, ಪರಿಹಾರದ ಹೆಚ್ಚಳ ಕೋರಿ 12.01.2009ರಂದು ಈ ನ್ಯಾಯಾಲಯದ ಎದುರು ಈ ಅಪೀಲನ್ನು ಸಲ್ಲಿಸಿದ್ದು, ತರುವಾಯ 18.11.2009ರಂದು ಮರಣ ಹೊಂದಿರುತ್ತಾನೆ. ಈತನ ಪತ್ನಿ ಶ್ರೀಮತಿ ಮೋದಿನ್ ಬಿ. ಆತನ ಕಾನೂನು ಪ್ರತಿನಿಧಿಯೆಂದು ಆಕೆ ದಾಖಲೆಗಳ ಮೇಲೆ ಬಂದು ಪ್ರಕರಣವನ್ನು ಮುಂದುವರೆಸಲು ಅನುಮತಿಸಲಾಗಿರುತ್ತದೆ.

3. ಅಪೀಲುದಾರರ ಪರ ಮಾನ್ಯ ವಕೀಲರು, ಮೃತನ ಪತ್ನಿಯ ಹೆಸರಿನಲ್ಲಿ ಅಪೀಲನ್ನು ಮುಂದುವರೆಸುವಲ್ಲಿನ ವ್ಯಾಜ್ಯದ ಕಾರಣವು, ಊರ್ಜಿತವಾಗಿರುತ್ತದೆಂದು ವಾದಿಸಿರುತ್ತಾರೆ. ಈಗಾಗಲೇ ನ್ಯಾಯಾಧಿಕರಣವು, ಪರಿಹಾರದಂತೆ ಸಂದಾಯ ಮಾಡಬೇಕಾದ ಹಣದ ಸ್ವಲ್ಪ ಮೊಬಲಗನ್ನು ನಿರ್ದಿಷ್ಟಪಡಿಸಿರುತ್ತದೆ. ಅಂದರೆ ಮೊಬಲಗು ಈಗಾಗಲೇ ಎಷ್ಟೆಂಬುದನ್ನು ಖಚಿತಪಡಿಸಿರುತ್ತದೆ. ಗಾಯಗೊಂಡ ವ್ಯಕ್ತಿಗೆ ಸಂದಾಯ ಮಾಡಬೇಕಾದ ಪರಿಹಾರ ಶಾಸನಾತ್ಮಕ ಬದ್ಧತೆಯಾಗಿರುತ್ತದೆ. ಇದು ಋಜುವಲ್ಲದ ಬದ್ಧತೆಯಾಗಿರುವುದಿಲ್ಲ. ಆದ್ದರಿಂದ, 'ವ್ಯಕ್ತಿಗಳ ಹಕ್ಕಿನ ವ್ಯವಹರಣೆಯು ವ್ಯಕ್ತಿಯ ಮರಣದೊಡನೆ ಅಂತ್ಯವಾಗುತ್ತದೆ' ಎಂಬ ತತ್ವವು ಅನ್ವಯವಾಗುವುದಿಲ್ಲ. ಇವರು, ನ್ಯಾಯಾಧಿಕರಣದ ಐತೀರ್ಪನ್ನು ಪ್ರಶ್ನಿಸಿ, ವಿಮಾ ಕಂಪನಿಯು ಅಪೀಲನ್ನು ಸಲ್ಲಿಸಿದಾಗ, ಗಾಯಗೊಂಡವನ ಕಾನೂನು ಸಮ್ಮತ ಪ್ರತಿನಿಧಿಯು, ಅಪೀಲು ಇತ್ಯರ್ಥದಲ್ಲಿರುವಾಗ ಗಾಯಗೊಂಡವನ ಮರಣಕ್ಕೆ

ಸಂಬಂಧಿಸಿದ ದಾಖಲೆಗಳೊಂದಿಗೆ ಬಂದಾಗ ಆಕೆಗೆ ಪ್ರಕರಣವನ್ನು ಮುಂದುವರೆಸಲು ಅವಕಾಶ ಕಲ್ಪಿಸಿದಲ್ಲಿ, ಗಾಯಗೊಂಡವರು ಅಪೀಲನ್ನು ಸಲ್ಲಿಸಿ, ತರುವಾಯ ಮೃತನಾದಲ್ಲಿ ಏಕೆ ಇದಕ್ಕೆ ಅನುಮತಿ ನೀಡಲಾಗುವುದಿಲ್ಲ? ಎಂಬ ಪ್ರಶ್ನೆಯನ್ನು ಎತ್ತಿರುತ್ತಾರೆ. ಈ ಸಂಬಂಧದಲ್ಲಿ, ಮುಂದುವರೆದು, ನ್ಯಾಯಾಧಿಕರಣವು ನ್ಯಾಯಯುತವಾದ ಪರಿಹಾರವನ್ನು ನೀಡಲು ವಿಫಲವಾದಾಗ ಅಪೀಲನ್ನು ಸಲ್ಲಿಸುವ ಅವಶ್ಯಕತೆ ಉದ್ಭವಿಸುತ್ತದೆಂದೂ ಸಹಾ ವಾದಿಸಿರುತ್ತಾರೆ. ನ್ಯಾಯಾಧಿಕರಣವು ನ್ಯಾಯೋಚಿತವಾದ ಪರಿಹಾರವನ್ನು ನೀಡಿದ್ದಲ್ಲಿ, ಕಾನೂನು ಪ್ರತಿನಿಧಿಗಳು, ಕ್ಲೇಮುದಾರರು ಐತೀರ್ಪನ್ನು ಹೊರಡಿಸಿದ ತರುವಾಯ ಮೃತಪಟ್ಟಲ್ಲಿ ಐತೀರ್ಪನ್ನು ಕಾರ್ಯರೂಪಕ್ಕೆ ತಂದುಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ಇದು ಅಸ್ತಿತ್ವದಲ್ಲಿರುವಾಗ, ಅಪೀಲು ಕಾನೂನು ಪ್ರತಿನಿಧಿಗಳ ಹೆಸರಿನಲ್ಲಿ ಊರ್ಜಿತವಾಗುತ್ತದೆ.

4. ಮುಂದುವರೆದು, ನ್ಯಾಯಾಧಿಕರಣವು, ನ್ಯಾಯಯುತವಾದ ಪರಿಹಾರವನ್ನು ನೀಡಲು ವಿಫಲವಾಗಿದೆಯೆಂದು ಇವರು ವಾದಿಸಿರುತ್ತಾರೆ. ನೋವು ಮತ್ತು ನಷ್ಟ, ಸೌಕರ್ಯಗಳ ನಷ್ಟ ಹಾಗೂ ಇತರೆ ಶೀರ್ಷಿಕೆಗಳಡಿಯಲ್ಲಿ ನೀಡಿರುವ ಪರಿಹಾರವು ತುಂಬಾ ಕಡಿಮೆ ಪ್ರಮಾಣದ್ದಾಗಿದ್ದು, ಈ ನ್ಯಾಯಾಲಯವು ವಿವಿಧ ಶೀರ್ಷಿಕೆಗಳಡಿಯಲ್ಲಿ ಪರಿಹಾರವನ್ನು ಹೆಚ್ಚಿಸಲೇ ಬೇಕಾಗಿರುತ್ತದೆಯೆಂದು ನಿವೇದಿಸಿದ್ದಾರೆ.

5. ಮತ್ತೊಂದು ಕಡೆ, ಪ್ರತ್ಯರ್ಜಿದಾರ ವಿಮಾ ಕಂಪನಿಯ ಪರ ಮಾನ್ಯ ವಕೀಲರು, ಗಾಯಗೊಂಡ ಕ್ಲೇಮುದಾರರ ಕಾನೂನು ಪ್ರತಿನಿಧಿಗಳು ಅಪೀಲನ್ನು ಪ್ರಾಸಿಕ್ಯೂಟ್ ಮಾಡಲು ಹಕ್ಕುಳ್ಳವರಾಗಿರುವುದಿಲ್ಲ. ಈ ವಾದವು *"ವ್ಯಕ್ತಿಗಳ ಹಕ್ಕಿನ ವ್ಯವಹರಣೆಯು ವ್ಯಕ್ತಿಯ ಮರಣದೊಡನೆ ಅಂತ್ಯವಾಗುತ್ತದೆ"* ಎಂಬ ತತ್ವವನ್ನು ಆಧರಿಸಿರುತ್ತದೆ. ಹುಸೇನ್ ಸಾಬ್‌ಗೆ ನೀಡಿದ್ದ ಪರಿಹಾರವು ಅವನಿಗೆ ಉಂಟಾಗಿದ್ದ ಗಾಯಗಳಿಗೆ ನೀಡಿದವಾಗಿವೆ ಎಂದು ಇವರು ವಾದಿಸಿರುತ್ತಾರೆ. ಆದ್ದರಿಂದ, ಮೋಟಾರು ವಾಹನಗಳ ಅಧಿನಿಯಮದ ಉಪಬಂಧಗಳಡಿಯಲ್ಲಿ ಗಾಯಗೊಂಡಿರುವುದಕ್ಕೆ ಲಭ್ಯವಾಗುವ ಪರಿಹಾರವು, ಮರಣದ ಸಂದರ್ಭದಲ್ಲಿ

ವೈಯಕ್ತಿಕವಾಗಿ ಭಿನ್ನ ಸ್ವರೂಪದಲ್ಲಿರುತ್ತದೆ. ನ್ಯಾಯಾಧಿಕರಣದ ಎದುರಿಗಿನ ವ್ಯವಹರಣೆಯ ಇತ್ಯರ್ಥದಲ್ಲಿರುವಾಗ ಗಾಯಗೊಂಡವನು ಮರಣಹೊಂದಿದಲ್ಲಿ, ಗಾಯಗೊಂಡವನ ಕಾನೂನು ಪ್ರತಿನಿಧಿಗಳು, ಕ್ಲೇಮು ಅರ್ಜಿಯನ್ನು ಹೆಚ್ಚಿನ ಕ್ರಮ ಜರುಗಿಸಲು ಅವರ, ಹೆಸರಿನಲ್ಲಿ ವ್ಯಾಜ್ಯ ಕಾರಣವು ಊರ್ಜಿತವಾಗುತ್ತದೆಂದು ಕ್ಲೇಮು ಮಾಡುವಂತಿಲ್ಲ. ಪ್ರಸ್ತುತ ಈ ಪ್ರಕರಣದಲ್ಲಿ, ಅಪೀಲು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಗಾಯಗೊಂಡವನು ಮೃತನಾಗಿರುತ್ತಾನೆ. ಆದ್ದರಿಂದ, ಕಾನೂನು ಪ್ರತಿನಿಧಿಯು ಮಾತ್ರವೇ ನ್ಯಾಯಾಧಿಕರಣವು ಐತೀರ್ಪು ನೀಡಿದ ಮೊಬಲಗಿಗೆ ಹಕ್ಕುಳ್ಳವನಾಗಿರುತ್ತಾರೆ. ಈಕೆ ಪರಿಹಾರದ ಹೆಚ್ಚಳ ಕೋರಿ ಸಲ್ಲಿಸಿದ ಅಪೀಲಿಗೆ ಕ್ರಮ ಜರುಗಿಸಿರುವುದಿಲ್ಲ. ಇವರು ***ಕನ್ನಮ್ಮ –ವಿರುದ್ಧ– ಡೆಪ್ಯೂಟಿ ಜನರಲ್ ಮ್ಯಾನೇಜರ್***[1] ಪ್ರಕರಣದಲ್ಲಿ ಈ ನ್ಯಾಯಾಲಯದ ಪೂರ್ಣ ಪೀಠದ ತೀರ್ಪಿನ ಮೇಲೆ ಹಾಗೂ ***ಶಾಂತಬಾಯಿ ದುಬೆ –ವಿರುದ್ಧ– ಕನ್ನಯ್ಯಲಾಲ್***[2] ಪ್ರಕರಣದಲ್ಲಿ ಮಧ್ಯಪ್ರದೇಶದ ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ತಮ್ಮ ವಾದಕ್ಕೆ ಆಧರಿಸಿರುತ್ತಾರೆ. ಆದ್ದರಿಂದ ಈ ಅಪೀಲನ್ನು ವಜಾಗೊಳಿಸಬೇಕೆಂಬುದು ಇವರ ವಾದವಾಗಿರುತ್ತದೆ.

6. ಅಪೀಲುದಾರರ ಪರ ಮಾನ್ಯ ವಕೀಲರು, **ಕನ್ನಮ್ಮ** ಪ್ರಕರಣದಲ್ಲಿ ವಿಧಿಸಿದ ಅನುಪಾತವು ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳಿಗೆ ಅನ್ವಯವಾಗಿರುವುದಿಲ್ಲವೆಂದು ವಾದಿಸಿರುತ್ತಾರೆ.

7. ಮೇಲೆ ಉಲ್ಲೇಖಿಸಿದಂಥ ಮಾನ್ಯ ವಕೀಲರ ವಾದ ವಿವಾದಗಳ ಹಿನ್ನೆಲೆಯಲ್ಲಿ ಇಡೀ ಪ್ರಕರಣವನ್ನು ಪರೀಕ್ಷೆ ಮಾಡಬೇಕಾಗಿರುತ್ತದೆ. ಹುಸೇನ್ ಸಾಬ್‌ರವರಿಗೆ ಉಂಟಾಗಿದ್ದ ಗಾಯಗಳಿಗಾಗಿ, ನ್ಯಾಯಾಧಿಕರಣವು, 91,000/– ರೂ.ಗಳ ಪರಿಹಾರವನ್ನು ಬಡ್ಡಿಯೊಂದಿಗೆ ನೀಡಲಾಗಿರುತ್ತದೆ. ಗಾಯಗೊಂಡವರ ಪ್ರಕಾರ ಈ ಮೊಬಲಗು ಸಾಕಷ್ಟಾಗಲೀ ಹಾಗೂ ನ್ಯಾಯಯುತವಾಗಲಿ ಆಗಿರುವುದಿಲ್ಲ.

1. ಐಎಲ್‌ಆರ್ 1990 ಕರ್ನಾಟಕ 4300 2. 1995 ಎಸಿಜೆ 706

ಆದ್ದರಿಂದ, 12.01.2009ರಂದು ಈ ಅಪೀಲನ್ನು ಆತ ಸಲ್ಲಿಸಿರುತ್ತಾನೆ. 18.11.2009ರಂದು ಆತ ಮೃತನಾಗಿರುತ್ತಾನೆ. ತರುವಾಯ, ಆತನ ಪತ್ನಿ ಶ್ರೀಮತಿ ಮೊದಿನಬಿ ದಂಡ ಪ್ರಕ್ರಿಯಾ ಸಂಹಿತೆಯ 3ನೇ ನಿಯಮದ XXIIನೇ ಆದೇಶದಡಿಯಲ್ಲಿ ಆಕೆ ಸಲ್ಲಿಸಿದ ಅರ್ಜಿಯನ್ನು ಅನುಸರಿಸಿ ದಾಖಲೆಯ ಮೇಲೆ ಬರಲು ಅನುಮತಿಸಲಾಗಿರುತ್ತದೆ. ದಾಖಲೆಗಳ ಪ್ರಕಾರವೇ ಅನುಮತಿಸಿರುವುದರಿಂದ, ಅಪೀಲನ್ನು ಮುಂದುವರೆಸುವ ಹಕ್ಕನ್ನು ಈಕೆ ಹೊಂದಿರುವುದಿಲ್ಲ ಎಂದು ಹೇಳಲಾಗುವುದಿಲ್ಲ. ಆಕೆಯ ಪತಿಗೆ ಉಂಟಾಗಿದ್ದ ಗಾಯಗಳಿಗೆ ಸಂಬಂಧಿಸಿದಂತೆ ನ್ಯಾಯಾಧಿಕರಣವು ಪರಿಹಾರವನ್ನು ನೀಡಿದ್ದರಿಂದಾಗಿ ಆಕೆಯ ಪರವಾಗಿ ವ್ಯಾಜ್ಯ ಕಾರಣವು ಊರ್ಜಿತವಾಗಿರುವುದಿಲ್ಲ. ಆತ, ಮೃತನಾಗದಿದ್ದಲ್ಲಿ, ಪರಿಹಾರ ಹೆಚ್ಚಿಸುವಂತೆ ಕೋರಿ ಅಪೀಲನ್ನು ಮುನ್ನಡೆಸಬಹುದಾಗಿತ್ತು. ಆತ ಮೃತನಾಗಿರುವುದರಿಂದ, ಆತನ ಪತ್ನಿಯು ನ್ಯಾಯಾಧಿಕರಣವು ನೀಡಿದ ಪರಿಹಾರವನ್ನು ಮಾತ್ರ ಪಡೆದುಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ. ಕಾನೂನು ಪ್ರತಿನಿಧಿಯಾಗಿ ಅಪೀಲನ್ನು ಮುನ್ನಡೆಸುವ ಹಕ್ಕು ಅನುವಂಶೀಯವಾಗಿರುವುದಿಲ್ಲ. ಅಪಘಾತದಿಂದ ಆದ ದೈಹಿಕ ಗಾಯಗಳೇ ಮರಣಕ್ಕೆ ಕಾರಣವಾಯಿತೆಂದು ಕಾರಣವನ್ನು ನಿರೂಪಿಸಿದಲ್ಲಿ, ಪತ್ನಿಯು ಅಪೀಲನ್ನು ಮತ್ತೆ ಮುಂದುವರೆಸುವ ಹಕ್ಕನ್ನು ಪಡೆಯುತ್ತಾಳೆ. ಮೇಲೆ ನಿರೂಪಿಸಲಾದ ಸಂದರ್ಭಗಳು, ಈ ಮುಂದೆ ಉದ್ಧರಿಸಿದಂಥ ಭಾರತೀಯ ಉತ್ತರಾಧಿಕಾರ ಅಧಿನಿಯಮದ 306ನೇ ಪ್ರಕರಣದ ವ್ಯಾಪ್ತಿಯೊಳಗಿನ ಮೊದಲ ವಿವರಣೆಯ ವ್ಯಾಪ್ತಿಯೊಳಗೆ ಸಂಪೂರ್ಣವಾಗಿ ಬರುತ್ತವೆ.

> ***306. ಮೃತನ ಅಥವಾ ಅವನ ವಿರುದ್ಧದ ತಗಾದೆಗಳು ಮತ್ತು ಕ್ರಮ ಕೈಗೊಳ್ಳುವ ಹಕ್ಕುಗಳು ನಿರ್ವಾಹಕ ಅಥವಾ ಆಡಳಿತಗಾರನಿಗೆ ಮತ್ತು ಅವನ ವಿರುದ್ಧ ಉಳಿಯುವುದು.***– *ಒಬ್ಬ ವ್ಯಕ್ತಿಗೆ ಅವನ ಮರಣದ ಕಾಲದಲ್ಲಿ, ಅವನ ಪರವಾಗಿ ಅಥವಾ ಅವನ ವಿರುದ್ಧ ಇರುವ ಯಾವುವೇ ತಗಾದೆಗಳು ಮತ್ತು ಯಾವುದೇ ಕ್ರಮ ಅಥವಾ ವಿಶೇಷ ವ್ಯವಹರಣೆಯನ್ನು ಪ್ರಾಸಿಕ್ಯೂಟ್ ಮಾಡಲು ಅಥವಾ ಪ್ರತಿ ರಕ್ಷಿಸಿಕೊಳ್ಳಲು ಇರುವ*

*ಎಲ್ಲ ಹಕ್ಕುಗಳು, ಭಾರತ ದಂಡ ಸಂಹಿತೆಯಲ್ಲಿ (1860ರ 45) ಪರಿಭಾಷಿಸಿದಂತೆ ಮಾನ ಹಾನಿ, ಹಲ್ಲೆ ಅಥವಾ ಪಕ್ಷಕಾರನ ಮರಣವನ್ನುಂಟು ಮಾಡದಂಥ ಇತರ ದೈಹಿಕ ಕ್ಷತಿಗಳ ಬಗೆಗಿನ ವ್ಯಾಜ್ಯ ಕಾರಣಗಳನ್ನು ಹೊರತುಪಡಿಸಿ, ಮತ್ತು ಆ ಪಕ್ಷಕಾರನ ಮರಣಾನಂತರ ಕೋರಲಾದ ಪರಿಹಾರವನ್ನು ಅನುಭೋಗಿಸಲಾಗದ ಅಥವಾ ಅದನ್ನು ಮಂಜೂರ್ಮಾಡುವುದು ನಿಷ್ಪ್ರಯೋಜಕವಾಗುವ ಪ್ರಕರಣಗಳನ್ನು ಹೊರತುಪಡಿಸಿ, ಅವನ ನಿರ್ವಾಹಕರು ಅಥವಾ ಆಡಳಿತಗಾರರಿಗೆ ಅಥವಾ ಅವರ ವಿರುದ್ಧ ಉಳಿಯುತ್ತದೆ.*

**ದೃಷ್ಟಾಂತಗಳು**

*(i) ಒಬ್ಬ ಅಧಿಕಾರಿಯ ಯಾವುದೇ ನಿರ್ಲಕ್ಷ್ಯತೆ ಅಥವಾ ತಪ್ಪಿತದ ಪರಿಣಾಮವಾಗಿ ರೈಲು ಮಾರ್ಗದಲ್ಲಿ ಡಿಕ್ಕಿ ಸಂಭವಿಸುತ್ತದೆ ಮತ್ತು ಒಬ್ಬ ಪ್ರಯಾಣಿಕನು ತೀವ್ರವಾಗಿ, ಆದರೆ ಮರಣವುಂಟಾಗದ ಹಾಗೆ ಗಾಯಗೊಳ್ಳುತ್ತಾನೆ. ಅವನು ಆ ತರುವಾಯ ಯಾವುದೇ ಕ್ರಮವನ್ನು ಕೈಗೊಳ್ಳದೆಯೆ ಮರಣ ಹೊಂದುತ್ತಾನೆ. ವ್ಯಾಜ್ಯ ಕಾರಣವು ಉಳಿಯುವುದಿಲ್ಲ.*

8. **ಕನ್ನಮ್ಮ** ಪ್ರಕರಣದಲ್ಲಿ (ಈ ಹಿಂದೆ ಹೇಳಿದ) ಈ ನ್ಯಾಯಾಲಯದ ಪೂರ್ಣ ಪೀಠದ ತೀರ್ಪನ್ನು ಉಲ್ಲೇಖಿಸುವುದು ಸೂಕ್ತವಾಗಬಹುದಾಗಿರುತ್ತದೆ. ಈ ಪ್ರಕರಣದಲ್ಲಿ ನಿರೂಪಿಸಲಾದ ತತ್ವಗಳು ಈ ಮುಂದಿನಂತಿರುತ್ತವೆ:

*(i) ಉತ್ತರಾಧಿಕಾರಿ ಅಧಿನಿಯಮದ 306ನೇ ಪ್ರಕರಣದಲ್ಲಿ ಒಳಗೊಂಡ 'ವ್ಯಕ್ತಿಗಳ ಹಕ್ಕಿನ ವ್ಯವಹರಣೆಯು ವ್ಯಕ್ತಿಯ ಮರಣದೊಡನೆ ಅಂತ್ಯವಾಗುತ್ತದೆ' ಎಂಬ ಸಾಮಾನ್ಯ ಕಾನೂನು*

*ನಿಯಮವು ಭಾರತಕ್ಕೆ ಅನ್ವಯವಾಗುವುದರಿಂದ, ವ್ಯಕ್ತಿಗಳ ಮರಣವು ಅಂಥ ಗಾಯಗಳ ಪರಿಣಾಮದಿಂದ ಉಂಟಾಗದಿರುವುದರಿಂದ ಮೋಟಾರು ಅಪಘಾತದಲ್ಲಿ ಉಂಟಾದ ದೈಹಿಕ ಗಾಯಗಳಿಗೆ ಸಂಬಂಧಿಸಿದಂತೆ ಪರಿಹಾರಕ್ಕಾಗಿ ವ್ಯಕ್ತಿಯು ಮಾಡಿದ ಕ್ಲೇಮು ಆತ/ಆಕೆಯ ಕಾನೂನು ಪ್ರತಿನಿಧಿಗಳಿಗೆ ಉಳಿಯುವುದಿಲ್ಲ;*

*(ii) ದೈಹಿಕ ಕ್ಷತಿಗಳಿಗೆ (ಅಪಕೃತ್ಯ) ಸಂಬಂಧಿಸಿದ ವ್ಯಕ್ತಿಯ ಹೆಸರಿನಲ್ಲಿನ ವ್ಯಾಜ್ಯಕಾರಣವನ್ನು ಉತ್ತರಾಧಿಕಾರದ ಅಧಿನಿಯಮದ 306ನೇ ವ್ಯಕ್ತ ನಿಬಂಧನೆಗಳಲ್ಲಿ ಅಂಥ ವ್ಯಕ್ತಿಯ ಅಂದರೆ ಆತನ/ಆಕೆಯ ಆಡಳಿತಗಾರರು ಅಥವಾ ಕಾನೂನು ಪ್ರತಿನಿಧಿಗಳಿಗೆ ಆತನ/ಆಕೆಯ ಮರಣದ ಮೇಲೆ ಊರ್ಜಿತವಾಗುವುದಿಲ್ಲವೆಂದು ಘೋಷಿಸಿರುವುದರಿಂದ ಅಪಕೃತ್ಯ (ಅಪಕೃತ್ಯಕಾರನು ಮಾಡಿದ ಮೋಟಾರು ಅಪಘಾತ)ವೆಂಬ ಆಧಾರದ ಮೇಲೆ ಗುರುತಿಸಲಾಗಿರುವ ದೈಹಿಕ ಕ್ಷತಿಗಳಿಗೆ ಸಂಬಂಧಿಸಿದ ವ್ಯಾಜ್ಯ ಕಾರಣ ಪರಿನಿಯಮಗಳ ಮೂಲಕವಲ್ಲದ ಸಾಮಾನ್ಯ ಕಾನೂನಿನ ಮೂಲಕ ಮಾನ್ಯತೆ ಪಡೆದ ಶೀರ್ಷಿಕೆಗಳಡಿಯಲ್ಲಿನ ಹಾನಿಗಳಿಗೆ ಸಂಬಂಧಿಸಿದ ಗಾಯಗೊಂಡ ವ್ಯಕ್ತಿಗಳ ಕ್ಲೇಮುಗಳು, ಅಂಥ ವ್ಯಕ್ತಿಯ ಮರಣದ ಮೇಲೆ, ಅಂಥ ಅಪಕೃತ್ಯವನ್ನು ಆಧರಿಸಿ ಆತ/ಆಕೆಯ ಕಾರ್ಯಪಾಲಕರು ಅಥವಾ ಆಡಳಿತಗಾರರಿಗೆ ಊರ್ಜಿತವಾಗುವುದಿಲ್ಲ.*

*(iii) ದೈಹಿಕ ಕ್ಷತಿಗಳಿಗೆ ಸಂಬಂಧಿಸಿದಂತೆ ಪರಿಹಾರವನ್ನು ಒಬ್ಬ ವ್ಯಕ್ತಿಯು ಮಾಡುವ ಕ್ಲೇಮು, ಕ್ರಿಮಿನಲ್ ನ್ಯಾಯಾಧಿಕರಣದ ಎದುರು ಇತ್ಯರ್ಥದಲ್ಲಿರುವುದರಿಂದ, ಮೊದಲ ಅಪೀಲು ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವುದರಿಂದ ಅಥವಾ*

*ಎರಡನೇ ಅಪೀಲು ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವುದರಿಂದ ಆತನ ಕಾನೂನು ಪ್ರತಿನಿಧಿಗಳಿಗೆ ದೈಹಿಕ ಕ್ಷತಿಗಳ ತರುವಾಯ ವ್ಯಕ್ತಿಯ ಮರಣಕ್ಕೆ ಕಾರಣವಾಗದಂಥ ಕ್ಲೇಮು ಊರ್ಜಿತವಾಗುವುದಿಲ್ಲ.*

*(iv) ದೈಹಿಕ ಕ್ಷತಿಗಳಿಗಾಗಿನ ಪರಿಹಾರಕ್ಕೆ ಸಂಬಂಧಿಸಿದ ಒಬ್ಬ ವ್ಯಕ್ತಿಯ ಒಂದು ಕ್ಲೇಮು, ಕ್ಲೇಮುಗಳ ನ್ಯಾಯಾಧಿಕರಣದ ಐತೀರ್ಪು ಅಥವಾ ಅಪೀಲು ನ್ಯಾಯಾಲಯದ ಡಿಕ್ರಿಯಾಗಿ ಪರಿಣಮಿಸಿದಲ್ಲಿ, ಅಂಥ ಮರಣ ಆತನಿಗೆ ಉಂಟಾದ ದೈಹಿಕ ಕ್ಷತಿಗಳ ಪರಿಣಾಮದಿಂದಾಗದಿದ್ದಲ್ಲಿ ಕೂಡ ಆತನ ಮರಣದ ಮೇಲೆ ಆತನ ಕಾನೂನು ಪ್ರತಿನಿಧಿಗಳು ಹಕ್ಕುಳ್ಳವರಾಗಿರುತ್ತಾರೆ. ಹಾಗಾಗಿ ಅಂಥ ಐತೀರ್ಪು ಅಥವಾ ಡಿಕ್ರಿ ಎರಡನೇ ಅಪೀಲು ನ್ಯಾಯಾಲಯದ ಮೊದಲ ಅಪೀಲು ನ್ಯಾಯಾಲಯದಲ್ಲಿ ವಿವಾದಗೊಂಡಲ್ಲಿ ಅದನ್ನು ಕ್ಲೇಮುದಾರನ ಕಾನೂನು ಪ್ರತಿನಿಧಿಗಳಿಂದ ನಿರ್ಬಂಧಿಸಬಹುದು.*

*(v) ಒಬ್ಬ ವ್ಯಕ್ತಿಯ ಆತನ/ಆಕೆಯ ಸಂಪದದ ನಷ್ಟದ ಶೀರ್ಷಿಕೆಯಡಿಯಲ್ಲಿನ ದೈಹಿಕ ಕ್ಷತಿಗಳಿಗೆ ಸಂಬಂಧಿಸಿದಂತೆ ಪರಿಹಾರಕ್ಕಾಗಿನ ಒಬ್ಬ ವ್ಯಕ್ತಿಯು ಕ್ಲೇಮನ್ನು, ಅಂಥ ಗಾಯಗಳಿಂದಾಗಿನ ಆತನ/ಆಕೆಯ ಮರಣದ ಮೇಲೆ, ಗಾಯಗೊಂಡ ವ್ಯಕ್ತಿಯ ಮರಣವನ್ನು ಕುರಿತಂತೆ ಅಧಿನಿಯಮದ 110ಎ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡ ದಡಿಯಲ್ಲಿ ಅವರು ಕ್ಲೇಮು ಅರ್ಜಿಥಿನ್ನು ಸಲ್ಲಿಸಿದಂತೆ ಹಾಗೂ ಸಲ್ಲಿಸಿದಾಗ ಶೀರ್ಷಿಕೆಯಡಿಯಲ್ಲಿ ಪರಿಹಾರಕ್ಕೆ ಸಂಬಂಧಿಸಿದ ಕ್ಲೇಮನ್ನು ಅವರು ಸೇರ್ಪಡೆ ಮಾಡಿಕೊಳ್ಳದಿದ್ದಲ್ಲಿ ಆತನ/ಆಕೆಯ ಕಾನೂನು ಪ್ರತಿನಿಧಿಗಳು ಪ್ರಾಸಿಕ್ಯೂಷನ್ ಮಾಡಬೇಕಾಗಿರುತ್ತದೆ.*

9. ಮಧ್ಯಪ್ರದೇಶದ ಉಚ್ಚ ನ್ಯಾಯಾಲಯಕ್ಕೆ ***ಶಾಂತಬಾಯಿ ದುಬೆ ಹಾಗೂ ಮತ್ತೊಬ್ಬರು –ವಿರುದ್ಧ– ಕನ್ನಯ್ಯಲಾಲ್ ಮತ್ತು ಮತ್ತೊಬ್ಬರು*** (ಈ ಮೇಲಿನ) ಪ್ರಕರಣದಲ್ಲಿನ ಸದರಿ ಆಯಾಮವನ್ನು ಪರಿಶೀಲಿಸುವ ಸಂದರ್ಭ ಒದಗಿಬಂದಿರುತ್ತದೆ. ಆ ಸಂದರ್ಭದಲ್ಲಿ ಮಧ್ಯಪ್ರದೇಶ ಉಚ್ಚ ನ್ಯಾಯಾಲಯವು ತಳೆದ ತೀರ್ಮಾನವು ಈ ಮುಂದಿನಂತಿರುತ್ತದೆ:

> *8. ಕಾನೂನು ಪ್ರತಿನಿಧಿಗಳ ದಾವಾ ಅಧಿನಿಯಮ (ಅಧಿನಿಯಮ ಸಂಖ್ಯೆ: 1855ರ XII)ವು ಜಾರಿಗೆ ಬಂದ ತರುವಾಯ 'ವ್ಯಕ್ತಿಗಳ ಹಕ್ಕಿನ ವ್ಯವಹರಣೆಯು ವ್ಯಕ್ತಿಯ ಮರಣದೊಡನೆ ಅಂತ್ಯವಾಗುತ್ತದೆ' ಎಂಬುದನ್ನು ಆ ಕಾನೂನಿನ ಪರಂತುಕದ ಮೇರೆಗೆ ಭಾರತದಲ್ಲಿ ಅನ್ವಯವಾಗುವಂತೆ ಮಾಡಬಹುದಾಗಿರುತ್ತದೆ. ದಾವೆ ಸಲ್ಲಿಸುವ ಹಕ್ಕು ಅನುವಂಶೀಯವಾಗಿರುವುದಿಲ್ಲ. ಆದ್ದರಿಂದ, ವ್ಯಕ್ತಿಗತ ತಪ್ಪಿನಿಂದಾದ ದೈಹಿಕ ಕ್ಷತಿಗಳಿಗೆ ಸಂಬಂಧಿಸಿದ ದಾವೆಯ ವಾದಿಯ ಮರಣದ ತರುವಾಯ ಕಾನೂನು ಪ್ರತಿನಿಧಿಗಳಿಂದ ಊರ್ಜಿತವಾಗುವುದಿಲ್ಲ.*

10. ಆದ್ದರಿಂದ ದಾಖಲೆಯ ಮೇಲೆ ಬಂದಿರುವ ಹುಸೇನ್ ಸಾಬ್‌ನ ಪತ್ನಿಯು, ಆತನ ಮರಣದ ತರುವಾಯ ಅಪೀಲನ್ನು ಮುಂದುವರೆಸುವ ಹಕ್ಕಿನ ವಾರಸುದಾರಿಕೆಯನ್ನು ಹೊಂದಿರುವುದಿಲ್ಲವೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಮೋಟಾರು ವಾಹನಗಳ ಅಧಿನಿಯಮದ 168ನೇ ಪ್ರಕರಣಕ್ಕನುಸಾರವಾಗಿ ಪರಿಹಾರವನ್ನು ಸಂದಾಯ ಮಾಡಬಹುದಾಗಿದ್ದಾಗ್ಯೂ, ಅಪಘಾತದಲ್ಲಿ ಗಾಯಗೊಳ್ಳುವ ಮೂಲಕ ಉಂಟಾದ ದೈಹಿಕ ಕ್ಷತಿಗಳಿಗೆ ಐತೀರ್ಪನ್ನು ನೀಡಲಾಗಿರುತ್ತದೆ. ಆದ್ದರಿಂದ, **ಕನ್ನಮ್ಮ** ಪ್ರಕರಣದಲ್ಲಿ ವಿಧಿಸಿರುವ ತತ್ವಗಳನ್ನು ಅನುಸರಿಸಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 3ನೇ ನಿಯಮದ ಕ್ರಮಾದೇಶದಡಿಯಲ್ಲಿನ ಅರ್ಜಿಯನ್ನು ಸಲ್ಲಿಸಲಾಗುವುದಿಲ್ಲವೆಂದು ಹೇಳಬೇಕಾಗುತ್ತದೆ, ಒಂದುವೇಳೆ ಅಜಾಗರೂಕತೆಯಿಂದ ಅನುಮತಿಸಿದಲ್ಲಿ, ಕಾನೂನು ಪ್ರತಿನಿಧಿಗೆ ಅಪೀಲನ್ನು ಮುಂದುವರೆಸಲು ಯಾವುದೇ

ಹಕ್ಕಿರುವುದಿಲ್ಲವೆಂದೂ ಹೇಳಬೇಕಾಗುತ್ತದೆ. ಈ ತತ್ವವು ನ್ಯಾಯಾಧಿಕರಣದ ಎದುರು ಕ್ಲೇಮು ಅರ್ಜಿಯು ಇತ್ಯರ್ಥದಲ್ಲಿರುವಾಗ ಗಾಯಗೊಂಡವನು ಮೃತನಾದಲ್ಲಿ ಕೂಡ ಅನ್ವಯವಾಗುತ್ತದೆ.

11. ಕ್ಲೇಮುದಾರನ ಪರ ಮಾನ್ಯ ನ್ಯಾಯವಾದಿಯು, ಪ್ರಸ್ತಾಪಿಸಿದ ಅಂಶವನ್ನು ಈ ತೀರ್ಪಿನ ಆರಂಭದಲ್ಲಿಯೇ ಪ್ರಸ್ತಾಪಿಸಿದ್ದು, ಆ ಅಂಶಕ್ಕೆ ಉತ್ತರಿಸಬೇಕಾದ ಅವಶ್ಯಕತೆ ಇರುತ್ತದೆ. ಅಪಘಾತದಲ್ಲಿ ಉಂಟಾದ ಗಾಯಗಳಿಂದ ಒಬ್ಬ ವ್ಯಕ್ತಿಯು ಮೃತನಾದಲ್ಲಿ ಹಾಗೂ ನ್ಯಾಯಾಧಿಕರಣವು ಗಾಯಗಳಿಗೆ ಪರಿಹಾರವನ್ನು ನೀಡಿದಲ್ಲಿ, ಐತೀರ್ಪನ್ನು ಹೊರಡಿಸಿದ ತರುವಾಯ ಗಾಯಗೊಂಡ ವ್ಯಕ್ತಿ ಮೃತನಾದಲ್ಲಿ, ನ್ಯಾಯಾಧಿಕರಣವು ನೀಡಿದ ಐತೀರ್ಪನ್ನು ಸಂಪದವನ್ನಾಗಿ ಪರಿವರ್ತಿಸಬೇಕಾಗಿರುತ್ತದೆ. ಒಂದು ವೇಳೆ ಮಾಲೀಕ ಅಥವಾ ವಿಮಾದಾರ ಐತೀರ್ಪನ್ನು ವಿವಾದ ಮಾಡಿ, ಅಪೀಲನ್ನು ಸಲ್ಲಿಸಿದಲ್ಲಿ, ಗಾಯಗೊಂಡು ಮೃತರಾದ ಕಾನೂನು ಪ್ರತಿನಿಧಿಗಳು, ಸಂಪದವನ್ನಾಗಿ ಐತೀರ್ಪಿಗೆ ಒಂದು ನಿರ್ದಿಷ್ಟ ರೂಪ ಕೊಡುವ ದೃಷ್ಟಿಯಲ್ಲಿ ನೀಡಿದ ಐತೀರ್ಪನ್ನು ಪ್ರತಿರಕ್ಷಿಸುವ ಹಕ್ಕನ್ನು ಹೊಂದಿರುತ್ತಾರೆ. ಕಾನೂನು ಪ್ರತಿನಿಧಿಗಳ ವಿರುದ್ಧದ ವ್ಯಾಜ್ಯ ಕಾರಣವು ಇಂಥ ಪರಿಸ್ಥಿತಿಯನ್ನು ಅಂತ್ಯಗೊಳಿಸುವುದಿಲ್ಲ. ಆದರೆ ಕಾನೂನು ಪ್ರತಿನಿಧಿಗಳು ಮೇಲೆ ಹೇಳಿದ ಕಾರಣಗಳಿಗೆ ಸಂಬಂಧಿಸಿದಂತೆ ಐತೀರ್ಪನ್ನು ಪ್ರಶ್ನಿಸುವುದಿಲ್ಲ. ಈ ಸಂದರ್ಭದಲ್ಲಿ, ***ಮೇಲೆಪುರತ್ ಸಂಕುನ್ನಿ ಎಜ್‌ಹುಥಾಸನ್ -ವಿರುದ್ಧ- ಥೆಕಿಟ್ಟಲ್ ಜಿಯೋಪಾಲಂಕುಟ್ಟಿ ನಾಯರ್***[3] ರವರ ಪ್ರಕರಣದಲ್ಲಿನ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇಲೆ ನಂಬಿಕೆ ಇಡುವುದು ತುಂಬಾ ಉಪಯುಕ್ತವಾಗಬಹುದಾಗಿರುತ್ತದೆ. ಅದು ಈ ಮುಂದಿನಂತಿರುತ್ತದೆ:

> *"7. ಮಾನನಷ್ಟಕ್ಕೆ ಸಂಬಂಧಿಸಿದ ದಾವೆಯನ್ನು ವಜಾ ಮಾಡಿರುವಲ್ಲಿ ಹಾಗೂ ವಾದಿಯು ಅಪೀಲನ್ನು ಸಲ್ಲಿಸಿರುವಲ್ಲಿ, ಅಪೀಲುದಾರ ವಾದಿಯು ಅಪೀಲಿನಲ್ಲಿ ಜಾರಿಗೊಳಿಸಲು*

3. 1996 ಎಸ್‌ಸಿಸಿ 118

*ಕೋರಿರುವುದೇನೆಂದರೆ ಮಾನನಷ್ಟಕ್ಕೆ ಸಂಬಂಧಿಸಿದ ಹಾನಿಗಳಿಗಾಗಿ ದಾವೆ ಸಲ್ಲಿಸುವ ಇವರ ಹಕ್ಕಾಗಿರುತ್ತದೆ ಹಾಗೂ ಈ ಹಕ್ಕು ಈತನ ಮರಣವನ್ನು ಊರ್ಜಿತಗೊಳಿಸುವುದಿಲ್ಲ. ಅಪೀಲು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಅಪೀಲುದಾರನು ಮೃತನಾದಲ್ಲಿ ಈತನ ಕಾನೂನು ಪ್ರತಿನಿಧಿಯನ್ನು, ಇವರ ಸ್ಥಾನಕ್ಕೆ ಅಥವಾ ಇವನಿಗೆ ಬದಲಾಗಿ ಅಪೀಲಿನ ದಾಖಲೆಯ ಮೇಲೆ ತರಲು ಯಾವುದೇ ಹಕ್ಕಿರುವುದಿಲ್ಲ ಹಾಗೂ ಆದಾಗ್ಯೂ ಅಂಥ ಪ್ರಕರಣದಲ್ಲಿ ವ್ಯಾಜ್ಯ ಕಾರಣವು ಡಿಕ್ರಿಯಲ್ಲಿ ವಿಲೀನವಾಗುವುದರಿಂದ ವಾದಿಯ ಹೆಸರಿನಲ್ಲಿನ, ಡಿಕ್ರಿಯಲ್ಲಿ ಮಾನನಷ್ಟಕ್ಕೆ ಸಂಬಂಧಿಸಿದ ದಾವೆಯು ಪರ್ಯಾವಸಾನಗೊಳ್ಳುವಲ್ಲಿ ವಿಭಿನ್ನವಾಗಿರುತ್ತದೆ. ಡಿಕ್ರಿಯ ಋಣವು ಈತನ ಸಂಪದದ ಭಾಗವನ್ನು ರೂಪಿಸುತ್ತದೆ ಮತ್ತು ಪ್ರತಿವಾದಿಯ ಡಿಕ್ರಿಯಿಂದ ಬಂದ ಅಪೀಲು ಪ್ರತಿವಾದಿ – ಪ್ರತ್ಯರ್ಜಿದಾರನ ಸಂಪದದ ಲಾಭದ ಅಥವಾ ಹಾನಿಯ ಪ್ರಶ್ನೆಯಾಗಿ ರೂಪುಗೊಳ್ಳುತ್ತದೆ. ಇದರಿಂದ ಈತನ ಕಾನೂನು ಪ್ರತಿನಿಧಿಗಳು ಅಹವಾಲನ್ನು ಎತ್ತಿ ಹಿಡಿಯಲು ಹಾಗೂ ಪ್ರತಿವಾದಿಸಲು ಹಕ್ಕುಳ್ಳವರಾಗುತ್ತಾರೆ. ಆದ್ದರಿಂದ ಇವರು ಮೃತ ಪ್ರತ್ಯರ್ಜಿದಾರ – ವಾದಿಯ ಸ್ಥಾನದಲ್ಲಿ ಪ್ರತ್ಯಾಯೋಜಿಸಲು ಹಕ್ಕುಳ್ಳವರಾಗಿರುತ್ತಾರೆ".*

12. ಆದ್ದರಿಂದ, ಕ್ಲೇಮುದಾರನ ಪರ ಮಾನ್ಯ ನ್ಯಾಯವಾದಿಯ ವಾದವು ಅಂಗೀಕಾರಾರ್ಹವಾಗಿರುವುದಿಲ್ಲ. ಈ ಚರ್ಚೆಯ ಪರಿಣಾಮವಾಗಿ, ಅಪೀಲು ವಿಫಲವಾಗಿದ್ದು, ತದನುಸಾರವಾಗಿ, ಯಾವುದೇ ವೆಚ್ಚಗಳಿಲ್ಲದೆ ಇದನ್ನು ವಜಾಗೊಳಿಸಲಾಗಿರುತ್ತದೆ.

---